ಓ ಎಸ್ ನಂ. 09/2020 ಪಿ.ಡಬ್ಲ್ಯೂ-2

ದಿನಾಂಕಃ 09-09-2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು ಶ್ರೀಮತಿ ವಿ ಬಿ ವಕೀಲರಿಂದಃ-

ದಾವಾ ವ್ಯವಹಾರ ಆಗುವ ಪೂರ್ವದಲ್ಲಿ ಮಾತುಕತೆ ಆಗಿತ್ತೋ ಇಲ್ಲವೋ ಎನ್ನುವ ವಿಷಯ ನನಗೆ ಗೊತ್ತಿಲ್ಲ. ಪ್ರತಿವಾದಿಯು ಹಣ ಪಡೆದುಕೊಂಡ ನಂತರ ಅದೇ ದಿನ ದಾವಾ ಆನ್ ಡಿಮಾಂಡ್ ಪ್ರಾಮಿಸರಿ ನೋಟನ್ನು ಹಾಗೂ ರಶೀದಿಯನ್ನು ಬರೆದುಕೊಟ್ಟರು. ವಾದಿಯು ಪ್ರತಿವಾದಿಗೆ 6 ಲಕ್ಷ ರೂ.ಗಳನ್ನು ಕೊಟ್ಟಿದ್ದರು. ವಾದಿಯು ಪ್ರತಿವಾದಿಗೆ 500 ರೂಪಾಯಿಯ 12 ಬಂಡಲ್ ಗಳನ್ನು ಕೊಟ್ಟರು. ದಾವಾ ರೆಸಿಟ್ ಗೆ ಸಹಿ ಹಾಕಲು ನನ್ನ ಅಜ್ಜಿ ನನಗೆ ಹೇಳಿದರು. ಪತ್ರವನ್ನು ಮಧ್ಯಾಹ್ನ 12 ರಿಂದ 1.00 ಗಂಟೆಯ ಸಮಯದಲ್ಲಿ ಬರೆಯಲಾಯಿತು. ಈ ವ್ಯವಹಾರಕ್ಕಿಂತ ಪೂರ್ವದಲ್ಲಿ ಪ್ರತಿವಾದಿಯ ತಾಯಿ ವಾದಿಯೊಡನೆ ವ್ಯವಹಾರ ಮಾಡಿದ್ದರು ಎಂದು ವಾದಿ ಹೇಳಿದ್ದರು. ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎನ್ನುವುದು ಸರಿ. ನಿಪಿ-1 ಹಾಗೂ 2 ರಲ್ಲಿ ಬರೆದಿರುವ ಅಕ್ಷರಗಳು ಒಂದು ಇಂಕಿನಲ್ಲಿ ಇದೆ, ಪ್ರತಿವಾದಿಯ ಸಹಿ ಬೇರೆ ಇಂಕಿನಲ್ಲಿ ಇದೆ ಅದೇ ರೀತಿ ಸಾಕ್ಷಿದಾರರ ಸಹಿಗಳೂ ಕೂಡ ಬೇರೆ ಬೇರೆ ಇಂಕಿನಲ್ಲಿ ಇದೆ ಎನ್ನುವುದು ನಿಜ. ಪತ್ರವನ್ನು ಬರೆಯಲು ಮಾಹಿತಿಯನ್ನು ವಾದಿ ಕೊಟ್ಟಿರುತ್ತಾರೆ ವಾದಿ ಹೇಳಿರುವ ಪ್ರಕಾರ ಬಿಕ್ಲಂದಾರನು ನಿಪಿ-1 ಹಾಗೂ 2 ನ್ನು ಬರೆದಿದ್ದಾನೆ ಎನ್ನುವುದು ನಿಜ. ನಾನು ನನ್ನ ಅಜ್ಜಿಯಾದ ಈ ಕೇಸಿನ ವಾದಿ ಹಾಗೂ ಬಿಕ್ಲಂದಾರ ಎಲ್ಲರೂ ಶಾಮೀಲಾಗಿ ನಿಪಿ-1 ಹಾಗೂ 2 ನ್ನು ಸೃಷ್ಟಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಪ್ರತಿವಾದಿಯು ವಾದಿಯ ಬಳಿಯಿಂದ ಯಾವುದೇ ಹಣ ಪಡೆದುಕೊಂಡಿಲ್ಲ ಎಂದು ಹೇಳುವುದು ಸರಿಯಲ್ಲ. ಅನುಸೂಯಮ್ಮ ಚೀಟಿ ವ್ಯವಹಾರ ಮಾಡುತ್ತಿದ್ದು ಆ ವ್ಯವಹಾರದ ಭದ್ರತೆಗಾಗಿ ಪ್ರತಿವಾದಿಯ

ತಾಯಿಯ ಕಡೆಯಿಂದ ಪಡೆದುಕೊಂಡ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿಯ ಮೇಲೆ ಸುಳ್ಳು ಕೇಸನ್ನು ಹಾಕಿದ್ದಾರೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಅನಿತ, ಜಿ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.